ಮೂ. ದಾ. ನಂ. 33/22

ಪಿ.ಡಬ್ಲ್ಯು.1

(ಇಂದು ದಿನಾಂಕಃ 21-11-2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ವಿ.ಎ.ಟಿ. ವಕೀಲರಿಂದಃ</u>**

ದಾವಾಸ್ತಿ ಮೊದಲು ನನ್ನ ಅಜ್ಜನ ಹೆಸರಿನಲ್ಲಿ ಇತ್ತು. ಅವರ ಹೆಸರು ಕೃಷ್ಣಾ ಅಣ್ವೇಕರ್ ಆಗಿದ್ದು ಅಜ್ಜನ ತಂದೆಯ ಹೆಸರು ಪಾಂಡುರಂಗ ಇರಬಹುದು. ನಾನು ಕೃಷ್ಣಾ ಅಣ್ವೇಕರ್ ಇವರ ವಾರಿಸುದಾರರು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ. ನನ್ನ ಅಜ್ಜನ ಹೆಸರು ಬರುವ ಮೊದಲು ದಾವಾಸ್ತಿಯು ಚಂದ್ರಿಕಾದೇವಿ ಬಾಡ ಟ್ರಸ್ಟ್ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ರಿಂದ 3 ಪಹಣಿಪತ್ರಿಕೆಯಲ್ಲಿ ಸೇಂಟ್ ಮೈಕಲ್ ಕಾನ್ವೆಂಟ್ ಮದರ್ ಸುಪಿರಿಯರ್ ಅವರ ಹೆಸರಿನಲ್ಲಿ ಇದೆ ಎಂದರೆ ಸರಿ. ನನ್ನ ಅಜ್ಜ ದಾವಾಸ್ತಿಯನ್ನು 1935 ರಲ್ಲಿ ಹಬ್ಬು ಕಡೆಯಿಂದ ಖರೀದಿ ಮಾಡಿದ್ದರು.

ಸೇಂಟ್ ಮೈಕಲ್ ಕಾನ್ವೆಂಟ್ ಹಳೆಯ ಕಾನ್ವೆಂಟ್ ಎಂದರೆ ಸರಿ. ಅದು ಸುಮಾರು 100 ವರ್ಷ ಹಳೆಯದ್ದು ಎಂದರೆ ಸರಿ. ನನ್ನ ಮುತ್ತಜ್ಜ ಸುಮಾರು 1925, 1935 ನೇ ಇಸ್ವಿಯಲ್ಲಿ ಸದರಿ ದಾವಾ ಸರ್ವೆ ನಂಬರನ ಅರ್ಧ ಜಾಗದಲ್ಲಿ ಕಾನ್ವೆಂಟ್ ನಡೆಸಲು ಕೊಟ್ಟಿದ್ದರು ಎಂದರೆ ಸರಿ. ನನ್ನ ಮುತ್ತಜ್ಜ ಕಾನ್ವೆಂಟ್ ನಡೆಸಲು ಅದನ್ನು ವಹಿಸಿ ಕೊಟ್ಟಿದ್ದರು ಎಂದರೆ ಸರಿ. 1935 ರಿಂದ ಈ ದಾವಾ ಲೀಗಲ್ ನೋಟಿಸ್ ಜಾರಿ ಮಾಡುವ ತನಕ ನಾನಾಗಲೀ, ನನ್ನ ತಂದೆಯಾಗಲೀ, ನನ್ನ ಅಜ್ಜರಾಗಲೀ ಯಾರೂ ದಾವಾಸ್ತಿಯನ್ನು ಬಿಟ್ಟುಕೊಡಲು ಕೇಳಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಮೌಖಿಕವಾಗಿ ನಾನು, ನನ್ನ ತಂದೆ ಹಾಗೂ ನನ್ನ ಅಜ್ಜ ಕೇಳಿದ್ದೆವು ಎನ್ನುವರು. ಈ ರೀತಿ ನನ್ನ ತಂದೆ, ನಾನು, ನನ್ನ ಅಜ್ಜ ಮೌಖಿಕವಾಗಿ ಕೇಳಿದ್ದೆವು ಎಂಬ ವಿಷಯವನ್ನು ನನ್ನ ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಯಾವ ವರ್ಷ, ಯಾವ ದಿನಾಂಕದಂದು ಮೌಖಿಕವಾಗಿ ಕೇಳಿದ್ದೆವು ಎಂದು

ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. ಇವತ್ತೇ ಪ್ರಥಮಬಾರಿಗೆ ಮೌಖಿಕವಾಗಿ ಕೇಳಿದ್ದೇವೆಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿ ಸ.ನಂ. 1383 ಬಿ/2 ಒಟ್ಟೂ ಕ್ಷೇತ್ರ 1 ಎಕರೆ 11 ಗುಂಟೆಯಾಗಿರುತ್ತದೆ. ಸದರಿ 1 ಎಕರೆ 11 ಗುಂಟೆ ಜಾಗ ಈಗ ಪ್ರತಿವಾದಿಯವರ ತಾಬಾದಲ್ಲಿ ಇದೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಜಾಗವನ್ನು ಇನ್ನೊಬ್ಬರಿಗೆ ಕೊಟ್ಟರೆ ಅದರ ಬಗ್ಗೆ ದಾಖಲಾತಿ ಇರುತ್ತದೆ ಎಂದರೆ ಸರಿ. ಆದರೆ ನಾವು ಶಾಲೆಗೆ ಕೊಟ್ಟಿದ್ದು. ಸಾಕ್ಷಿ ಮುಂದುವರಿದು ನಮ್ಮ ಹಳೆಯ ಮನೆ ಸುಂಕೇರಿಯಲ್ಲಿದ್ದು ಆ ಹಳೆ ಮನೆ ಬಿದ್ದು ಹೋಗಿ ದಾಖಲೆಗಳು ನಾಶವಾಗಿವೆ ಎನ್ನುವರು. ಈಗ ನಾನು ಬಾಡ್‌ನಲ್ಲಿ ವಾಸ ಮಾಡುತ್ತಿದ್ದೇನೆ. ಈ ವಿಷಯವನ್ನು ಪ್ರತಿವಾದಿಯರು ಅವರ ಕೌಂಟರ್ ಕ್ಲೇಮ್ ಸಲ್ಲಿಸಿದ ನಂತರ ನನ್ನ ವಕೀಲರ ಬಳಿ ಹೇಳಿರುತ್ತೇನೆ. ಕೌಂಟರ್ ಕ್ಲೇಮ್‌ಗೆ ನಾನು ಸಲ್ಲಿಸಿದ ಪ್ರತಿವಾದ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ನಾನು ಹೇಳಿದ ವಿಷಯವನ್ನು ಪ್ರತಿವಾದ ಪತ್ರದಲ್ಲಿ ಬರೆದಿದ್ದಿರೋ ಇಲ್ಲವೋ ಎಂದು ವಕೀಲರ ಬಳಿ ಕೇಳಿರುತ್ತೇನೆ. ದಾಖಲೆಗಳು ನಾಶವಾಗಿವೆ ಎಂದು ಹೇಳಿದ ವಿಷಯವನ್ನು ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ದಾವಾಸ್ತಿ ಮೊದಲು ತುಕಾರಾಮ ಕೇಶವ ಶೇಟ್ ಎನ್ನುವವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ತುಕಾರಾಮ ಕೇಶವ ಶೇಟ್‌ರವರು ದಾವಾಸ್ತಿಯನ್ನು ಪ್ರತಿವಾದಿಯರಿಗೆ ದಿನಾಂಕ 24-06-1957 ರಲ್ಲಿ ಕ್ರಯಪತ್ರವನ್ನು ರೂ. 2,800/- ಗೆ ನೋಂದಣಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಆ ವರ್ಷದಿಂದ ಇಲ್ಲಿಯವರೆಗೆ ಪ್ರತಿವಾದಿಯರು ಯಾವುದೇ ತೊಂದರೆ ಅಡಚಣೆ ಇಲ್ಲದೇ ದಾವಾಸ್ತಿಯನ್ನು ಅನುಭವಿಸಿ ಬಂದಿರುತ್ತಾರೆ ಎಂದರೆ ಸರಿ. Permissive Possessor ಬಗ್ಗೆ ನನಗೆ ಮಾಹಿತಿ ಇಲ್ಲ. Permissive Possessor ಆಗಿ ಆಸ್ತಿಯನ್ನು ಕೊಟ್ಟರೆ ಅವರ ಹೆಸರು ಪಹಣಿಪತ್ರಿಕೆ ಅಥವಾ ಇತರ ದಾಖಲಾತಿಯಲ್ಲಿ ನಮೂದಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. Permissive Possessor ಎನ್ನುವ ಬಗ್ಗೆ ನಾನು ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನನಗೆ Permissive

ಮೂ. ದಾ. ನಂ. 33/22

ಪಿ.ಡಬ್ಲ್ಯು.1

Possessor ಬಗ್ಗೆ ಮಾಹಿತಿ ಇಲ್ಲ ಎಂದು ಈಗಾಗಲೇ ಹೇಳಿದ್ದು ಈಗ ಮಾಹಿತಿ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. Permissive Possessor ಕೊಟ್ಟಿರುವ ಬಗ್ಗೆ ದಾಖಲಾತಿ ಇರುತ್ತದೆ. ಆ ದಾಖಲಾತಿ ಕೊಟ್ಟಿದ್ದೇನೆ. ಅದು ಯಾವ ದಾಖಲಾತಿ ಎಂದು ನನಗೆ ಗೊತ್ತಿಲ್ಲ. ವಕೀಲರಿಗೆ ಗೊತ್ತಿದೆ. ಸಾಮಾನ್ಯವಾಗಿ ಯಾವುದೇ ವಸ್ತುವನ್ನು ಹಿಂಪಡೆಯುವ ಉದ್ದೇಶದಿಂದ ನೀಡಿದ್ದರೆ ಅದಕ್ಕೆ ಸಂಬಂಧಪಟ್ಟ ದಾಖಲಾತಿ ಇರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ನಾನಾಗಲೀ, ನನ್ನ ಪೂರ್ವಜರಾಗಲೀ ಪ್ರತಿವಾದಿಯರಿಗೆ ಯಾವುದೇ ದಾಖಲಾತಿ ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಅದು ನಾಶವಾಗಿರುತ್ತದೆ ಎನ್ನುವರು. ದಾವಾಸ್ತಿಯನ್ನು ನನ್ನ ಪೂರ್ವಜರು ಸುಮಾರು 50 – 60 ವರ್ಷಗಳ ಹಿಂದೆ ಪ್ರತಿವಾದಿಯರಿಗೆ ನೀಡಿರುವ ಬಗ್ಗೆ ನನಗೆ ಮಾಹಿತಿ ಇದೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ